## ಹರಕೆ ಮರ



ದೇವಾಲಯಕ್ಕೆ ಹೋಗುವ ಭಕ್ತರು ತಮ್ಮ ಆಸೆಗಳನ್ನು ನೆರವೇರಿಸುವಂತೆ ದೇವರಲ್ಲಿ ಹರಕೆ ಹೊರುತ್ತಾರೆ. ಅಂತೆಯೇ ಹರಕೆಯನ್ನೂ ತೀರಿಸುತ್ತಾರೆ. ಪ್ರಕೃತಿಯಲ್ಲಿರುವ ಮರಗಿಡಗಳನ್ನೂ ಪೂಜಿಸಿ ಹರಕೆ ಹೊರುವ ಸಂಪ್ರದಾಯವೂ ನಮ್ಮಲ್ಲಿದೆ. ಹಂಪಿ ಪುರಂದರ ಮಂಟಪದಿಂದ ಕೋದಂಡರಾಮ ದೇವಸ್ಥಾನಕ್ಕೆ ಹೋಗುವ ದಾರಿಯ ಎಡಬದಿಯ ಮರದಲ್ಲಿ ಹಲವಾರು ಜೋಲಿಗಳು ಹಾಗೂ ಮರದ ಮುಂಭಾಗದಲ್ಲಿ ಕಲ್ಲುಗಳನ್ನು ಮನೆಯಂತೆ ಜೋಡಿಸಿರುವುದು ನೋಡುಗರಲ್ಲಿ ಅಚ್ಚರಿ ಮೂಡಿಸುತ್ತದೆ.

ಮಕ್ಕಳಿಲ್ಲದವರು ತಮಗೆ ಮಕ್ಕಳನ್ನು ಕರುಣಿಸೆಂದು ಹರಕೆ ಹೊತ್ತು ಬಟ್ಟೆಯ 'ಜೋಲಿ' ಯೊಳಗೆ ಕಲ್ಲನ್ನಿಟ್ಟು ಮರದ ಕೊಂಬೆಗಳಿಗೆ ತೂಗುಹಾಕುತ್ತಾರೆ. ಹೀಗೆ ಮಾಡುವುದರಿಂದ ಮಕ್ಕಳಿಲ್ಲದವರಿಗೆ ಮಕ್ಕಳಾಗುತ್ತವೆ. ಹಾಗೆಯೇ ಮನೆಯಿಲ್ಲದವರು, ಅಲ್ಲೇ ದೊರೆಯುವ ಕಲ್ಲುಗಳನ್ನು ಮನೆ ರೀತಿಯಲ್ಲಿ ಜೋಡಿಸಿದರೆ, ಶೀಘ್ರದಲ್ಲೇ ಮನೆ ನಿರ್ಮಾಣ ಮಾಡುವ ಭಾಗ್ಯವನ್ನು ಪಡೆಯುತ್ತಾರೆ ಎಂಬ ನಂಬಿಕೆಯಿದೆ.

–ಜಿ.ನಾಗೇಂದ್ರ, ಸಂಡೂರು



## ಡಂ ಡಂ ನಗಾರಿ

ಗಂಗಾವತಿಯಿಂದ 8 ಕಿ.ಮೀ. ಅಂತರದಲ್ಲಿರುವ ಚಿಕ್ಕಬೆಣಕಲ್ ಗ್ರಾಮದ ಸಮೀಪವಿರುವ ಬೆಟ್ಟದ ಕಾಲು ದಾರಿಯಲ್ಲಿ ಹದಿನೈದು ನಿಮಿಷ ಸಾಗಿದಾಗ ನಮ್ಮೆದುರಿನ ಬಲಭಾಗದಲ್ಲಿ ನಗಾರಿ ಆಕಾರದ ಕಲ್ಲು ಬಂಡೆ ಕಣ್ಮನವನ್ನು ಸೂಜಿಗಲ್ಲಿನಂತೆ ಸೆಳೆಯುತ್ತದೆ.

ಒಂದು ಕೈ ನೋಡಿಯೇ ಬಿಡೋಣವೆಂದು ಆ ಕಲ್ಲಿನ ಬಳಿ ತೆರಳುವುದಾದರೆ ಅತಿ ಜಾಗ್ರತೆಯಿಂದ ಹೆಜ್ಜೆ ಹಾಕಬೇಕು ಇಲ್ಲವೆ ದೂರದಿಂದಲೇ ಕಣ್ತುಂಬಿಕೊಳ್ಳಬೇಕು ಅಷ್ಟು ಎತ್ತರದಲ್ಲಿದೆ. ಒಂದು ಕ್ಷಣ ಅದನ್ನು ಯಾರು ಕೆತ್ತಿದರು? ಎಂದು ಶಿಲ್ಪಿಯ ಕುರಿತು ಆಲೋಚಿಸುವದಾದರೆ ನಿಮ್ಮ ಪ್ರಶ್ನೆ ಆಲೋಚನೆಗೆ ಉತ್ತರವಿಲ್ಲ. ಇದು ಸೃಷ್ಟಿಕರ್ತನ ವೈಭವ ನಗಾರಿ.

–ಮೈಲಾರಪ್ಪ ಬೂದಿಹಾಳ, ಮುಗಿಲ ಹಕ್ಕಿ

## ಅಲಂಕಾರಿಕ ಬಂಡಿ



ಹಿಂದೆ ದೂರದ ಊರುಗಳಿಗೆ ಕುಟುಂಬ ಸಮೇತ ಪ್ರಯಾಣಿಸಲು ಇದ್ದ ಅನುಕೂಲ ಸಾಧನವೆಂದರೆ ಎತ್ತಿನ ಬಂಡಿ. ಮನೆಯವರ ಅಂತಸ್ತು, ಅನುಕೂಲಕ್ಕೆ ತಕ್ಕಂತೆ ಆ ಎತ್ತಿನ ಗಾಡಿಗಳು ನಿರ್ಮಾಣವಾಗುತ್ತಿದ್ದವು. ಮೇಲೆ ಕಮಾನಿರುವ, ಅಕ್ಕಪಕ್ಕದಲ್ಲಿ ಕಿಟಕಿಗಳಿರುವ ಬಂಡಿಗಳೂ ಇದ್ದವು. ಚಿತ್ರದಲ್ಲಿ ಕಾಣುವ ಎತ್ತಿನ ಬಂಡಿಯನ್ನು ಹಾಸನ–ಬೇಲೂರು ರಸ್ತೆಯಲ್ಲಿರುವ ಹೊಯ್ಸಳ ವಿಲೇಜ್ ರಿಸಾರ್ಟ್‌ನಲ್ಲಿ ಇಡಲಾಗಿದೆ. ಬಂಡಿಯಯನ್ನು ಸುಂದರ ಬಣ್ಣ ಹಾಗೂ ಚಿತ್ರಗಳಿಂದ ಅಲಂಕರಿಸಲಾಗಿದ್ದು, ಒಳಗಡೆ ಕುಳಿತುಕೊಳ್ಳಲು ಸೋಫಾ ಸೀಟುಗಳಿವೆ. ಸಾಮಾನ್ಯ ಬಂಡಿಗಳಿಗಿಂತ ಇದು ಎತ್ತರವಾಗಿದ್ದು, ರೆಸಾರ್ಟ್‌ಗೆ ಆಗಮಿಸುವ ಪ್ರವಾಸಿಗರ ಗಮನವನ್ನು ಇದು ಸೆಳೆಯುತ್ತಿದೆ.

–ಸುಘೋಷ ಸ. ನಿಗಳೆ, ಬೆಂಗಳೂರು